

**ನನ್ನ ಪಾಡಿಗೆ ನನ್ನನ್ನು ಬಿಡಿ...**
ಚಳಿಗೆ ಹೆಪ್ಪುಗಟ್ಟುತ್ತಿರುವ ಹಡ್ಸನ್ ಕೊಲ್ಲಿಯ ತೀರದಲ್ಲಿ ಹಿಮಕರಡಿ

ಶೇ 30ರಷ್ಟು ಕಡಿಮೆಯಾಗಿದೆ.

‘ಈ ಕ್ಷಣದಿಂದಲೇ ನಾವು ವಾಯುಮಾಲಿನ್ಯಕ್ಕೆ ಕಡಿವಾಣ ಹಾಕಿದರೂ ಈ ಶತಮಾನದ ಅಂಚಿಗೆ ಒಂದಿಷ್ಟು ಹಿಮಕರಡಿಗಳ ಗುಂಪುಗಳು ನಾಮಾವಶೇಷವಾಗುವುದನ್ನು ತಪ್ಪಿಸಲು ಆಗುವುದಿಲ್ಲ. ಆದರೆ ಸಂತಾನೋತ್ಪತ್ತಿ ಸಾಮರ್ಥ್ಯ ಕಡಿಮೆಯಿರುವ ಒಂದಿಷ್ಟು ಹಿಮಕರಡಿಗಳು ಉಳಿದುಕೊಳ್ಳುವ ಸಾಧ್ಯತೆ ನಿಚ್ಚಳವಾಗಿದೆ’ ಎನ್ನುವುದು ಸಂಶೋಧಕ ಮೊಲ್ನಾರ್ ಅವರ ವಿಶ್ಲೇಷಣೆ.

ಹಿಮಕರಡಿಗಳ 19 ಗುಂಪುಗಳನ್ನು ವಿಶ್ವದಲ್ಲಿ ಗುರುತಿಸಲಾಗಿದೆ. ಈ ಪೈಕಿ 13 ಗುಂಪುಗಳ ಮೇಲೆ ಸಂಶೋಧನೆ ನಡೆದಿದೆ. ಈ 13 ಗುಂಪುಗಳು ವಿಶ್ವದ ಒಟ್ಟು ಹಿಮಕರಡಿಗಳ ಸಂಖ್ಯೆಯ ಶೇ 80ರಷ್ಟು ಪಾಲು ಹೊಂದಿವೆ.

‘ವಾಯುಮಾಲಿನ್ಯ ನಿಯಂತ್ರಣಕ್ಕೆ ನಾವು ಮುಂದಾಗದಿದ್ದರೆ 2040ರ ವೇಳೆಗೆ ಕೆನಡಾದ ದಕ್ಷಿಣ ಹಡ್ಸನ್ ಕೊಲ್ಲಿ ಮತ್ತು ಡೇವಿಸ್ ಖಾರಿಯ ಹಿಮಕರಡಿಗಳು ಸಂತಾನೋತ್ಪತ್ತಿ ಸಾಮರ್ಥ್ಯ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚು. ಅಲಾಸ್ಕಾ ಮತ್ತು ರಷ್ಯಾದ ಹಿಮಕರಡಿಗಳು 2080ರ ವೇಳೆಗೆ ಹೆಚ್ಚು ಸಮಸ್ಯೆಗಳನ್ನು ಎದುರಿಸುತ್ತವೆ. 2100ರ ಹೊತ್ತಿಗೆ ವಿಶ್ವದ ಎಲ್ಲ ಹಿಮಕರಡಿಗಳಲ್ಲಿ ಸಂತಾನೋತ್ಪತ್ತಿ ಸಮಸ್ಯೆ ಕಾಣಿಸಿಕೊಂಡು ವಂಶ ಬೆಳೆಯುವುದು ನಿಂತು ಹೋಗುತ್ತದೆ’ ಎನ್ನುತ್ತದೆ ಈ ಅಧ್ಯಯನ.

‘ನಮ್ಮ ಲೆಕ್ಕಾಚಾರಗಳು ಸೈದ್ಧಾಂತಿಕವಾಗಿ ಸರಿಯಿವೆ’ ಎನ್ನುವುದು ಪೋಲಾರ್ ಬೇರ್ ಇಂಟರ್‌ನ್ಯಾಷನಲ್ ಸಂಸ್ಥೆಯ ಮುಖ್ಯ ವಿಜ್ಞಾನಿ ಸ್ಟೀವನ್ ಆಮ್‌ಸ್ಟ್ರಪ್ ಅವರ ಮಾತು. ‘ಉಪವಾಸ ಕಾಲಗಳು ಆರಂಭವಾಗುವಾಗ ಇರುವ ಹಿಮಕರಡಿಗಳ ದೇಹದ ಸ್ಥಿತಿಯನ್ನು ವಾಸ್ತವಕ್ಕಿಂತ ಹೆಚ್ಚು ಶಕ್ತಿಯಿರುವಂತೆ ಭಾವಿಸಿ ಲೆಕ್ಕಹಾಕಲಾಗಿದೆ. ಹಿಮಕರಡಿಗಳು ತಮ್ಮ ದೇಹವನ್ನು ಸುಸ್ಥಿತಿಯಲ್ಲಿರಿಸಿಕೊಳ್ಳಲು ಬಳಸಿಕೊಳ್ಳುವ ಶಕ್ತಿಯ ಪ್ರಮಾಣದ ಬಗ್ಗೆಯೂ ಎಚ್ಚರಿಕೆಯಿಂದ ಅಂದಾಜಿಸಲಾಗಿದೆ. ಈ ಸಂಶೋಧನಾ ವರದಿಯಲ್ಲಿ ನಾವು ವ್ಯಕ್ತಪಡಿಸಿರುವ ಆತಂಕಗಳು ನಾವು ಅಂದುಕೊಂಡಿರುವುದಕ್ಕಿಂತಲೂ ಬೇಗನೇ ಕಾಣಿಸಿಕೊಳ್ಳಬಹುದು’ ಎಂದು ಅವರು ಅಭಿಪ್ರಾಯಪಡುತ್ತಾರೆ.

## ನೆಲೆ ಉಳಿದರೆ ಉಳಿದೀತು ಜೀವಿ

ವಿಶ್ವದ ಇತರ ಜೀವಿಗಳು ಬೇಟೆ ಅಥವಾ ಅರಣ್ಯನಾಶದಿಂದ ಅಳಿವಿನ ಆತಂಕ ಎದುರಿಸುತ್ತಿವೆ. ಆದರೆ ಹಿಮಕರಡಿಗಳ ವಿಚಾರದಲ್ಲಿ ಹಾಗಲ್ಲ. ಅವುಗಳ ಸಮಸ್ಯೆ ಇನ್ನೂ ಸಂಕೀರ್ಣ. ಅವುಗಳ ಆವಾಸಸ್ಥಾನವಾಗಿರುವ ಸಾಗರವನ್ನು ಆವರಿಸಿದ ಮಂಜುಗಡ್ಡೆಯನ್ನು ಸಂರಕ್ಷಿಸಿದರೆ ಮಾತ್ರ ಹಿಮಕರಡಿಗಳು ಉಳಿದುಕೊಳ್ಳುತ್ತವೆ. ನಾವು ಇಂದಿನಿಂದಲೇ ವಾಯುಮಾಲಿನ್ಯ ಪ್ರಮಾಣ ಕಡಿಮೆ ಮಾಡಿದರೂ, ಈಗಾಗಲೇ ಆಗಿರುವ ಹಾನಿಯ ಪರಿಣಾಮವನ್ನು ಜೀರ್ಣಿಸಿಕೊಳ್ಳಲು ಸಮುದ್ರಗಳಿಗೆ 30 ವರ್ಷ ಬೇಕಾಗುತ್ತದೆ. ಅನಂತರವಾದರೂ ಪರಿಸ್ಥಿತಿ ಸುಧಾರಿಸೀತು. ಆದರೆ ಕಾರ್ಬನ್ ಡೈಆಕ್ಸೈಡ್ ಹೊರಸೂಸುವಿಕೆಯನ್ನು ಇದೇ ರೀತಿ ಮುಂದುವರಿಸಿದರೆ ಅದರ ಪರಿಣಾಮ ಏನಾಗಬಹುದು?

‘ಮುಂದಿನ ದಿನಗಳಲ್ಲಿ ಮನುಷ್ಯರು ಮತ್ತು ಕರಡಿಗಳ ಸಂಘರ್ಷ ಹೆಚ್ಚಾಗುವ ಸಾಧ್ಯತೆಯನ್ನೂ ತಳ್ಳಿಹಾಕಲು ಆಗುವುದಿಲ್ಲ’ ಎನ್ನುವುದು ಅಲ್ಬರ್ಟಾ ವಿವಿಯ ಜೀವಶಾಸ್ತ್ರದ ಪ್ರಾಧ್ಯಾಪಕ ಆಂಡ್ರ್ಯೂ ಡೆರೋಚೆರ್ ಅವರ ಅಭಿಪ್ರಾಯ. ‘ಹಿಮಕರಡಿಗಳ ಆವಾಸಸ್ಥಾನವಿರುವ ಎಲ್ಲ ದೇಶಗಳೂ ಅವುಗಳ ಸಂರಕ್ಷಣೆಗೆ ಅಗತ್ಯ ಕ್ರಮಗಳನ್ನು ರೂಪಿಸುತ್ತಿಲ್ಲ. ಹಿಮಕರಡಿಗಳ ಸಂತತಿ ಉಳಿಸಬೇಕಾದ್ದು ಮನುಷ್ಯರ ನೈತಿಕ ಜವಾಬ್ದಾರಿಯಲ್ಲವೇ’ ಎನ್ನುವುದು ಅವರ ಪ್ರಶ್ನೆ.

‘ಹೆಪ್ಪುಗಟ್ಟುವ ಸಾಗರಗಳು ಕಡಿಮೆಯಾದಂತೆ ಹಸಿದ ಹಿಮಕರಡಿಗಳು ಭೂಮಿಗೆ ಬರುತ್ತವೆ. ಹೀಗೆ ತಮ್ಮ ಆವಾಸಸ್ಥಾನ ಬಿಟ್ಟು ಹೊರಬಂದ ಹಿಮಕರಡಿಗಳ ಜೀವ ಉಳಿಸುವುದು ಹೇಗೆ? ದೊಡ್ಡಸಂಖ್ಯೆಯ ಹಿಮಕರಡಿಗಳಿಗೆ ಆಹಾರ ಒದಗಿಸಿ ಕಾಪಾಡಿಕೊಳ್ಳಲು ಸಾಧ್ಯವೇ? ಇಂಥ ಸಂದರ್ಭಗಳಲ್ಲಿ ಅನುಸರಿಸಬೇಕಾದ ಕಾರ್ಯತಂತ್ರ ಯಾವುದು? ನೆಲೆ ಕಳೆದುಕೊಂಡ ಹಿಮ ಕರಡಿಗಳನ್ನು ಪೂರಕ ವಾತಾವರಣವಿರುವ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಿಸುವುದು ಸೂಕ್ತವೇ’ ಎಂಬ ಬಗ್ಗೆಯೂ ಅಧ್ಯಯನಗಳು ನಡೆಯಬೇಕಿದೆ’ ಎನ್ನುತ್ತಾರೆ ಅವರು.

ಪಾವಗಡ ತಾಲ್ಲೂಕಿನಲ್ಲಿ ಕುರುಚಲು ಕಾಡು ಕಡಿಮೆಯಾದ ಮೇಲೆ ಅದನ್ನೇ ನೆಲೆ ಮಾಡಿಕೊಂಡಿದ್ದ ಕರಡಿಗಳು ಊರಿಗೆ ನುಗ್ಗುವುದು ಹೆಚ್ಚಾಯಿತು. ಸಂಘರ್ಷದ ಸುಳಿಗೆ ಸಿಲುಕಿ ನಾಮಾವಶೇಷವಾಗುವ ಸ್ಥಿತಿ ತಲುಪಿದವು. ಇದರ ಜೊತೆಜೊತೆಗೆ ಒಂದು ಕಾಲಕ್ಕೆ ಸಮೃದ್ಧಿಯಾಗಿದ್ದ ಅಂತರ್ಜಲ ಪಾತಾಳಕ್ಕಿಳಿದು ಫ್ಲೂರೊಸಿಸ್ ಸಮಸ್ಯೆ ಕಾಣಿಸಿಕೊಂಡಿತು. ಜನರು ಮೂಳೆಸವೆತದ ಬಾಧೆ ಅನುಭವಿಸಬೇಕಾಯಿತು. ನಾಯಕರ ಕಾಲದ ‘ಸಮೃದ್ಧ ಪಾವಗಡ’ ಇಂದು ‘ಬರದ ನೆಲೆವೀಡು’.

ಆರ್ಕ್‌ಟಿಕ್‌ನ ಹಿಮಕರಡಿಗಳೂ ಸಹ ತಮ್ಮ ಪಾವಗಡದ ಕಪ್ಪು ಸ್ನೇಹಿತರ ಹಾದಿಯನ್ನೇ ಹಿಡಿದಿದ್ದಾರೆ ಎನ್ನುವುದು ವಿಪರ್ಯಾಸ. ನಾವು ಇಂದಿನಿಂದ ಬದಲಾದರೆ 2100ರ ನಂತರವೂ ಈ ಬಿಳಿ ಗೆಳೆಯರು ಅಲ್ಲಿನ ಹೆಪ್ಪುಗಟ್ಟಿದ ಸಾಗರದ ಮೇಲೆ ಸಂತೋಷದಿಂದ ಉಸಿರಾಡುತ್ತಾರೆ. ಅವರಿಗಾಗಿ ನಾವೂ ತುಸು ಬದಲಾಗೋಣವೇ?

ಒಂದು ಸರಳ ಪ್ರಶ್ನೆ. ಆರ್ಕ್‌ಟಿಕ್ ಹಿಮ ಕರಗಿದರೆ ಕಡಲತಡಿಯ ನಮ್ಮ ನಗರಗಳು ಏನಾದೀತು? ಈಗ ಯೋಚಿಸಿ ನಾವು ಬದಲಾಗಬೇಕಿರುವುದು ಹಿಮಕರಡಿಗಳಿಗಾಗಿಯೋ ಅಥವಾ ನಮ್ಮ ಉಳಿವಿಗಾಗಿಯೋ? ಅಲ್ಲಿ ಹಿಮಕರಡಿಗಳು ಉಳಿದರೆ ಇಲ್ಲಿ ನಮ್ಮ ಮಂಗಳೂರು, ಕಾರವಾರಗಳೂ ಉಳಿದಾವು.

ಪ್ರತಿಕ್ರಿಯಿಸಿ: feedback@sudha.co.in